<u>**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**</u>

<u>**Spl.C. 114/2024**</u>

ದಿನಾಂಕ 02.07.2026.
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ -1 ಪ್ರಾಸಾ -1

| | | |
|---|---|---|
| ಹೆಸರು | ಃ | ಪ್ರವೀಣ್ |
| ತಂದೆಯ ಹೆಸರು | ಃ | ಅಶ್ವತ್ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಅರಳಾಳುಸಂದ್ರ ಗ್ರಾಮ, ಕನಕಪುರ |

<u>**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**</u>

ಚಾಸಾ-2 ರಿಂದ 7 ನನಗೆ ಗೊತ್ತು. ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನಾಗಿರುತ್ತೇನೆ. 1 ಮತ್ತು 2ನೇ ಆರೋಪಿತರಾದ ಸಂಜಯ್ ಮತ್ತು ಕಿರಣ್ ನನಗೆ ಗೊತ್ತು. ಅವರು ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಆರೊಪಿಗಳಿಗೆ ನಾನು ಆದಿಕರ್ನಾಟಕ ಜನಾಂಗಕ್ಕೆ ಸೇರಿದವ ಎಂದು ತಿಳಿದಿದೆ.

2. ದಿಃ 22.04.2024 ರಂದು ನಾನು, ಉದಯ್, ದುರ್ಗೇಶ್ ಮತ್ತು ಹೊಂಬಾಳಯ್ಯ ನ ವಿರುದ್ಧ ಊರಿನಲ್ಲಿ ಜಾತಿ ವಿವಾದ ನಡೆದಿತ್ತು. ನಮ್ಮ ವಿರುದ್ಧ ನಾಗರಾಜ್, ಸಂಜಯ್, ಕಿರಣ್ ರವರು ಜಾತಿ ನಿಂದನೆ ಮಾಡಿ ಜಗಳವಾಡಿದ್ದರು. ಈ ವಿಚಾರವಾಗಿ ನಾವು ಪೊಲೀಸ್ ಠಾಣೆಗೆ ದೂರು ಕೊಡಲು ಹೋಗಿ ಲಿಖಿತವಾಗಿ ದೂರು ಕೊಟ್ಟಿದ್ದೆವು. ಆ ಸಮಯದಲ್ಲಿ ಊರಿನ ಹಿರಿಯರು ದೂರು ನೀಡುವುದು ಬೇಡ ಊರಲ್ಲೇ ಪಂಚಾಯಿತಿ

ಮಾಡುವ ಎಂದು ಹೇಳಿದ ಕಾರಣ ನಾವುಗಳು ಅದಕ್ಕೆ ಒಪ್ಪಿಕೊಂಡು ದೂರು ನೋಂದಣಿ ಮಾಡುವುದು ಬೇಡ ಎಂದು ಹೇಳಿ ವಾಪಸ್ಸು ಬಂದೆವು.

3. ಅದಾಗಿ 15-20 ದಿನ ಕಳೆದರೂ ಸಹ ಯಾವುದೇ ನ್ಯಾಯ ಪಂಚಾಯಿತಿ ನಡೆದಿಲ್ಲ. ಅವರು ಹೊಲೆಯರು ನಾವೇನು ನ್ಯಾಯಾ ಪಂಚಾಯಿತಿ ಮಾಡುವುದು ಎಂದು ಊರಲ್ಲಿ ಹೇಳಲು ಪ್ರಾರಂಭಿಸಿದರು. ಆ ಕಾರಣ ದಿಃ 18.05.2024 ರಂದು ನಾನು, ಉದಯ್, ದುರ್ಗೇಶ್ ಮತ್ತು ಹೊಂಬಾಳಯ್ಯ ರವರು ಮಾತನಾಡಿಕೊಂಡು ಇವರು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ನಾವು ದೂರನ್ನು ಮುಂದುವರೆಸುವ ಎಂದು ತೀರ್ಮಾನಿಸಿಕೊಂಡು ಪೊಲೀಸ್ ಠಾಣೆಗೆ ಬೈಕಿನಲ್ಲಿ ಹೋಗುತ್ತಿದ್ದೆವು ಅದನ್ನು ತಿಳಿದುಕೊಂಡು ನಾವು ಕಳ್ಳಳ್ಳಿ ಗ್ರಾಮದ ಶನಿಮಹಾತ್ಮ ದೇವಸ್ಥಾನದ ಬಳಿ ಬಂದಾಗ ಸಂಜಯ್ ಮತ್ತು ಕಿರಣ್ ಎದುಗುಗಡೆಯಿಂದ ಕಾರಿನಲ್ಲಿ ಬಂದು ನಾನು ಹೋಗುತ್ತಿದ್ದ ಬೈಕಿಗೆ ಡಿಕ್ಕಿ ಮಾಡಿದ ಕಾರಣ ನಾನು ಕೆಳಗೆ ಬಿದ್ದೆ. ಆಗ ನನ್ನ ದೇಹದ ಎಡಭಾಗಕ್ಕೆ ನೋವಾಯಿತು. ನಾನು ಕೆಳಕ್ಕೆ ಬಿದ್ದಾಗ ಆರೋಪಿ ಸಂಜಯ್ ಕೈಯ ಮುಷ್ಟಿಯಿಂದ ನನ್ನ ಮೂಗು, ಕೆನ್ನೆ, ಭುಜ ಮತ್ತು ಹೊಟ್ಟೆಗೆ ಗುದ್ದಿದ. ನನ್ನ ಬೈಕಿನಲ್ಲಿ ನನ್ನ ಜೊತೆ ಉದಯ್ ಸಹಾ ಇದ್ದು ಆತನೂ ಸಹ ಕೆಳಕ್ಕೆ ಬಿದ್ದಿದ್ದು ಎದ್ದು ನನ್ನ ಬಳಿ ಜಗಳ ಬಿಡಿಸಲು ದುರ್ಗೇಶ್ ಮತ್ತು ಹೊಂಬಾಳಯ್ಯ ಬಂದಾಗ ಅವರಿಗೂ ಸಹ ಜಾತಿ ನಿಂದನೆ ಮಾಡಿ ಬೈದು ಹೊಲೆಯ ಸೂಳೇಮಕ್ಕಳೇ, ನೀವು ನಮ್ಮ ಹತ್ತಿರ ತೋಟದಲ್ಲಿ ಕೂಲಿ ಮಾಡುತ್ತೀರಾ, ನಿಮಗೆ ಅಷ್ಟೊಂದು ದುರಹಂಕಾರ, ದೌವತ್ತು ಇದೆ ಎಂದು ಹೇಳಿ ಕೈಯಿಂದ ಗುದ್ದಿ ಹೊಡೆದರು. ನಿಮ್ಮ ಮನೆಯ ಮಹಿಳೆಯರೂ ಸಹ ನಮ್ಮ ತೋಟದಲ್ಲಿ ಕೂಲಿ ಕೆಲಸಕ್ಕೆ ಬರುತ್ತಾರೆ ಅವರನ್ನು ಮುಂದೆ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಬೈದು, ನಿಮ್ಮನ್ನು ಬದುಕಲು ಬಿಡುವುದಿಲ್ಲ ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದರು.

4. ನನಗೆ ಏಟಾಗಿದ್ದ ಕಾರಣ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಬಂದು ದೂರು ನೀಡಿದೆ. ದಿಃ 18.05.2024 ರ ದೂರು ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿ.ಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

5. ದಿಃ 22.04.2024 ರಂದು ನೀಡಿರುವ ದೂರು ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿ.ಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

6. ದಿಃ 19.05.2024 ರಂದು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಬೆಳಿಗ್ಗೆ 10 ರಿಂದ 11.00 ಗಂಟೆ ಸಮಯದಲ್ಲಿ ಸ್ಥಳದಲ್ಲಿ ಮಹಜರ್ ಬರೆದು ಫೋಟೋ ತೆಗೆದಿರುತ್ತಾರೆ. ಮಹಜರ್ ಅನ್ನು ನಿ.ಪಿ.3 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನಿಶಾನೆ ಪಿ.4 ಮತ್ತು 5 ಎಂದು ಗುರುತಿಸಲಾಯಿತು.

7. ದಿಃ 28.06.2024 ರಂದು ಪೊಲೀಸರು ನನ್ನ ಬೈಕನ್ನು ಪೊಲೀಸ್ ಠಾಣೆಗೆ ತರುವಂತೆ ಹೇಳಿ ನನ್ನ ದ್ವಿಚಕ್ರ ವಾಹನವನ್ನು ಮತ್ತು ಅದರ ಕೀ ಅನ್ನು ಅಮಾನತ್ತು ಪಡಿಸಿಕೊಂಡರು. ಅಮಾನತ್ತು ಕ್ರಮವನ್ನು ಬೆಳಿಗ್ಗೆ 10.00 ರಿಂದ 11.00 ಗಂಟೆಗೆ ಜರುಗಿಸಿದ್ದು ಸದರಿ ಪಂಚನಾಮೆಗೂ ಸಹ ನಾನು ಸಹಿ ಮಾಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿ.ಪಿ.6 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ನನ್ನ ವಾಹನದ ಪೊಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು

ನಿಪಿ.7 ಮತ್ತು 8 ಎಂದು ಗುರುತಿಸಲಾಯಿತು. ಸದರಿ ನನ್ನ ವಾಹನವನ್ನು ಈತನಕ ನನ್ನ ವಶಕ್ಕೆ ಪಡೆದಿಲ್ಲ.

8. ನನ್ನ ವಾಹನಕ್ಕೆ ಡಿಕ್ಕಿ ಮಾಡಿದಂತಹ ಕಾರಿನ ಫೊಟೋವನ್ನು ನೋಡಿದರೆ ಸಹಾ ಗುರುತಿಸಬಲ್ಲೆ. ಕಾರಿನ ಎರಡು ಪೊಟೋಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಪಿ.9 ಮತ್ತು 10 ಎಂದು ಗುರುತಿಸಲಾಯಿತು.

9. ಅಮಾನತ್ತುಪಡಿಸಿಕೊಂಡ ದ್ವಿಚಕ್ರ ವಾಹನದ ಕೀ ಅನ್ನು ಸಂಬಂಧಿಸಿದ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವ ಕಾರಣ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**